Levy of Octroi by the Mangalore Municipality.

*Q.—32. Sri A. KRISHNA SHETTY (Mangalore II).—

Will the Minister for Development, Panchayat Raj and Municipal Administration be pleased to state :—

(*a*) whether any memorandums' representations, or letters have been received by the Government in connection with levying of Octroi by the Mangalore Municipality and requesting the Government to take necessary steps, so that the Octroi is not levied ;

(*b*) the number of articles and the number and names of food articles which are covered by Octroi ?

A.—Sri R. M. PATIL (Minister for Development, Panchayat Raj and Municipal Administration).—

(*a*) No representations have been received by Government.

(*b*) None, as the proposals of the Municipality have not yet come up to Government.

ಶ್ರೀ ಎ. ಕೃಷ್ಣಶೆಟ್ಟಿ.—ಮಂಗಳೂರು ಮುನಿಸಿಪಾಲಿಟಿಯವರು ನರ್ಧಾನುಮತದಿಂದ ಆಕ್ಟ್ರಾಯಿ ಹಾಕುವುದಿಲ್ಲ ಎಂದು ತೀರ್ಮಾನಮಾಡಿದ್ದಾರೆ. ಈ ತೀರ್ಮಾನವನ್ನು ನೀವು ಗೌರವಿಸುತ್ತೀರಾ ?

Sri R. M. PATIL.—The Government is not in possession of the resulution and as such it is not advisable that I should say anything now.

ಶ್ರೀ ನಂಜೀವನಾಥ ಐಕಳ.—ಆಕ್ಟ್ರಾಯಿ ತೆಗೆದು ಹಾಕಿರುವ ತೀರ್ಮಾನ ಕೈಕೊಂಡದ್ದು ನಾರ್ವತ್ರಿಕ ಹರತಾಳ ಮುಖ್ಯ ಕಾರಣವಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅದು ಗೊತ್ತಿಲ್ಲ.

Shifting of the Deputy Labour Commissioner's Office to Hubli

*Q.—212. Sri GANGADHAR NAMOSHI (Gulbarga).—

Will the Minister for Transport and Tourism be pleased to state :—

(*a*) whether the office of the Deputy Labour Commissioner has been shifted to Hubli and the Government Order issued in this behalf ;

(*b*) the reason for the said order ;

(*c*) whether the Finance Department was consulted in this matter ?

A.— Sri D. DEVARAJ URS (Minister for Transport and Tourism).—

(*a*) Yes.

(*b*) For Administrative convenience and efficiency.

(*c*) Yes.

ಶ್ರೀ ಗಂಗಾಧರ ನಾಮೋಷಿ.—ಹುಬ್ಬಳ್ಳಿಗೆ ಅಡ್ಮಿನಿಸ್ಟ್ರೇಟೀವ್ ಕನ್‌ವೀನಿಯನ್ಸ್ ಸಲುವಾಗಿ ತೆರಪು ಮಾಡುತ್ತೀರಿ ಎಂದು ಹೇಳಿದ್ದೀರಿ. ಅಲ್ಲ ಏನು ಕೆಲಸ ಹೆಚ್ಚಿಗೆ ಆಗಿದೆ, ಏನೇನು ಕಾರಣ ಎನ್ನುವುದನ್ನು ಸ್ವಲ್ಪ ವಿವರಣೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ವರ್ಕ್ ಸಾಕಷ್ಟು ಇದೆ. ಈಗ ಅನೇಕ ಲೇಬರ್ ಕಾನೂನುಗಳು ಜಾರಿಮಾಡಬೇಕಾದುದು ತಪ್ಪಿಗೆ ಗೊತ್ತಿದೆ ಮತ್ತು ಡೆಪ್ಯೂಟಿ ಲೇಬರ್ ಕಮೀಷನರ್ ಪೋಸ್ಟ್ ಕೆಲವಾರು ವರ್ಷಗಳ ಹಿಂದೆ ಇರಲಿಲ್ಲ. ಇಲ್ಲಿ ಇಟ್ಟುಕೊಳ್ಳಬೇಕು ಎಂದು ಕೆಲವಾರು ವರ್ಷಗಳಿಂದ ಯೋಜನೆ ಮಾಡಿತ್ತು. ಲೇಬರ್ ಕಮೀಷನರ್ ಕೆಲಸ ಜಾಸ್ತಿಯಾಗುತ್ತಿದೆ. ಈಗ ಲೇಬರ್ ಕಮೀಷನರ್ ಕಾರ್ಯಗಳನ್ನು ನಾನಾ ವಿಭಾಗ ಮಾಡಿ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಾಗಿ ಏಂಗಡಿಸರಾಗಿದೆ. ಡೈರೆಕ್ಟರ್ ಆಫ್ ಎಂಪ್ಲಾಯ್‌ಮೆಂಟ್ ಎಂಡ್ ಟ್ರೈನಿಂಗ್ ಎಂದು ಮಾಡಿದ್ದೇವೆ. ಅವರ ಪೋಸ್ಟ್ ಮೊದಲು ಇರಲಿಲ್ಲ. ಅದನ್ನು ಲೇಬರ್ ಕಮೀಷನರೇ ನೋಡಿಕೊಳ್ಳುತ್ತಿದ್ದರು. ಅವರಿಗೆ ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರ ಲೆವೆಲ್‌ನಲ್ಲಿ ಒಬ್ಬ ಅಸಿಸ್ಟೆಂಟ್ ಕೊಟ್ಟಿದೆ. ಚೀಫ್ ಇನ್‌ಸ್ಪೆಕ್ಟರ್ ಆಫ್ ಬಾಯಿಲರ್ಸ್ ಹುದ್ದೆ ಬೇರೆ ಕ್ರಿಯೇಟ್ ಮಾಡಿದ್ದೇವೆ. ಅಪ್ರಂಟೀಸ್ ಅಡ್ವೈಸರ್ ಮಾಡಿದ್ದೇವೆ. ಮೊದಲು ಅದನ್ನು ಲೇಬರ್ ಕಮೀಷನರ್‌ರವರೇ ನೋಡಿಕೊಳ್ಳುತ್ತಿದ್ದರು. ಈ ರೀತಿ 3-4 ವಿಭಾಗಗಳನ್ನು ಬೇರೆಬೇರೆಯಾಗಿ ಮಾಡಿರುವುದರಿಂದ ಲೇಬರ್ ಕಮೀಷನರ್‌ರವರು ಈ ಕಾರ್ಯಗಳೆಲ್ಲಾ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿಗೆ ಬಹಳ ದೂರ ಇರುವುದರಿಂದ ಬೇಗ ಬೇಗ ಬಂದಂಥ ಕಂಪ್ಲೈಂಟ್ಸನ್ನು ಇತ್ಯರ್ಥ ಮಾಡಬೇಕಾಗಿದೆ. ಲೇಬರ್ ಕಾನೂನು ಸರಿಯಾಗಿ ಇಂಪ್ಲಿಮೆಂಟ್ ಮಾಡಬೇಕು. ಷಾಪ್ಸ್ ಎನ್ಟಾಬ್ಲಿಷ್‌ಮೆಂಟ್ ಆಕ್ಟ್ ಅಲ್ಲಿ ಜಾರಿಗೆ ಬಂದಿದೆ. ಮಿನಿಮಮ್ ವೇಜಸ್ ಆಕ್ಟ್‌ಗೆ ಸಂಬಂಧಪಟ್ಟ ಕೆಲಸಕಾರ್ಯ ನೋಡಿಕೊಳ್ಳಬೇಕು. ಈ ಎಲ್ಲಾ ಕಾರಣದಿಂದ ಈ ಆಫೀಸನ್ನು ಅಲ್ಲಿಗೆ ಟ್ರಾನ್ಸ್‌ಫರ್ ಮಾಡರಾಗಿದೆ ಅವರು ನೋಡಿಕೊಳ್ಳುತ್ತಾರೆ.

ಶ್ರೀ ಗಂಗಾಧರ ನಾಮೋಷಿ.—ಲೇಬರ್ ಕಮೀಷನರ್ ಪೋಸ್ಟ್, ಚೆಕ್ಕಿಕರ್ ಪೋಸ್ಟ್ ಬೇರೆ ಕಡೆ ಲೇಬರ್ ಆಫೀಸಿನಲ್ಲಿ ಡೆಪ್ಯೂಟಿ ಲೇಬರ್ ಕಮೀಷನರ್ ಪೋಸ್ಟ್ ಇರುವುದು ಉಂಟು. ಇಲ್ಲಿ ಬೇರೆ ವ್ಯವಸ್ಥೆ ಮಾಡಿದ್ದೀರೋ ?

ಶ್ರೀ ಡಿ. ದೇವರಾಜ್ ಅರಸ್.—ಬೆಂಗಳೂರಲ್ಲಿ ಡೆಪ್ಯೂಟಿ ಲೇಬರ್ ಕಮೀಷನರ್ ಪೋಸ್ಟ್ ಅಗತ್ಯವಿಲ್ಲ. ಆದ್ದರಿಂದ ಹಾಗೆ ಯೋಚನೆ ಮಾಡಿದೆ.

Prosecution of passengers travelling without tickets in the M.S.R.T.C. Buses.

*Q.—229. Sri R. N. LAKSHMIPATHI (Gauribidanur).—

Will the Minister for Transport and Tourism be pleased to state:—

whether it is a fact that the passengers who travel in M.S.R.T.C. Buses, without possessing tickets though they have paid money for the tickets are being prosecuted ?

A.—Sri D. DEVARAJ URS (Minister for Transport and Tourism).—

No.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಾನು ಪ್ರಶ್ನೆ ಕಳುಹಿಸಿದ ಉದ್ದೇಶ ಇಷ್ಟೆ. ಗೌರಿಬಿದನೂರು ತಾಲ್ಲೂಕಿನಲ್ಲಿ, ಕೆಲವು ಹೆಂಗಸರು ಟಿಕೆಟ್ಟಿಗೆ ದುಡ್ಡು ಕೊಟ್ಟಿದ್ದಾರೆ, ಆದರೆ ಟಿಕೆಟ್ ತೆಗೆದುಕೊಂಡಿರಲಿಲ್ಲ. ಅವರನ್ನು ಹಿಡಿದು ಪ್ರಾಸಿಕ್ಯೂಟ್ ಮಾಡಿದ್ದಾರೆ. ಇದು ನಿಜವೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಇದು ಏನು, ಸ್ಪಷ್ಟವಿ.

ಶ್ರೀ ಡಿ. ದೇವರಾಜ್ ಅರಸ್.—ಸ್ಪೆಸಿಫಿಕ್ ಆಗಿ ಕೇಳಿದ್ದಕ್ಕೆ ಹೇಳಬಹುದಾಗಿತ್ತು. ಜನರಲ್ ಆಗಿ ಕೇಳಿದಿರಿ, ಇಲ್ಲ ಎಂದು ಹೇಳಿದ್ದೇವೆ.